RNU AIR DHARWAD

SEPTEMBER 16, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ರಾಜ್ಯದ 300 ರೇಲ್ವೆ** ಕೆಳ ಸೇತುವೆ ಹಾಗೂ ಮೇಲ್ಸೇತುವೆ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದ ಆರ್ಥಿಕ ನೆರವು

**ರಾಜ್ಯದಲ್ಲಿ ಹೈನೋದ್ಯಮದ ಪ್ರಗತಿ:** ಹಾಲು ಉತ್ಪಾದನೆಯಲ್ಲಿ, ಕರ್ನಾಟಕಕ್ಕೆ ಎರಡನೇ ಸ್ಥಾನ

**ಕಲ್ಯಾಣ ಕರ್ನಾಟಕದಲ್ಲಿ ತುರ್ತು** ಹೃದ್ರೋಗ ಸೇವೆ: ಕೆ.ಕೆ.ಆರ್.ಡಿ.ಬಿ ಯಿಂದ 'ಹಾರ್ಟ್‌ಲೈನ್' ಯೋಜನೆ

**'ವಿಜ್ಞಾನದಿಂದ, ಜಾಗತಿಕ ಕ್ರಿಯೆಯೆಡೆಗೆ'**, ಧ್ಯೇಯದೊಂದಿಗೆ, ಇಂದು ವಿಶ್ವ ಓಝೋನ್ ದಿನ

<><><>

**ಬೆಳಗಾವಿ ಜಿಲ್ಲೆಯಲ್ಲಿ ರೇಲ್ವೆ ಇಲಾಖೆ** ಅಭಿವೃದ್ಧಿ ಕಾರ್ಯಗಳಿಗೆ ಕಳೆದ 11 ವರ್ಷಗಳಲ್ಲಿ 2 ಸಾವಿರದ 900 ಕೋಟಿ ರೂಪಾಯಿ ವಿನಿಯೋಗಿಸಲಾಗಿದೆ. ಬೆಳಗಾವಿ–ಕಿತ್ತೂರು ರೇಲ್ವೆ ಕಾಮಗಾರಿಗೆ ಅಗತ್ಯವಿರುವ, ಭೂಸ್ವಾಧೀನ ಪ್ರಕ್ರಿಯೆ ಶೇಕಡ 90 ರಷ್ಟು ಪೂರ್ಣಗೊಂಡಿದೆ ಎಂದು ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು. ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧಾರವಾಡ, ಹುಬ್ಬಳ್ಳಿ ಸೇರಿದಂತೆ ರಾಜ್ಯದ 300 ರೇಲ್ವೆ ಮೇಲ್ಸೇತುವೆ ಹಾಗೂ ಕೆಳ ಸೇತುವೆ ಕಾಮಗಾರಿಗಳಿಗೆ ಕೇಂದ್ರ ಸರ್ಕಾರ ಹಣಕಾಸಿನ ನೆರವು ನೀಡಿದೆ ಎಂದರು. ಬೆಳಗಾವಿಯ ಖಾನಾಪುರದ ರಸ್ತೆ ಕೆಳಸೇತುವೆ ಕಾಮಗಾರಿ, ರೈಲು ನಿಲ್ದಾಣದ ಮೂಲಸೌಕರ್ಯ ಕಾಮಗಾರಿಗೆ ಅವರು ಚಾಲನೆ ನೀಡಿದರು. ಬಳಿಕ ಖಾನಾಪುರದಲ್ಲಿ ನಿಲುಗಡೆಗೆ ಅವಕಾಶ ಕಲ್ಪಿಸಿದ, ಹುಬ್ಬಳ್ಳಿ– ದಾದರ್ ಸೆಂಟ್ರಲ್ ಎಕ್ಸಪ್ರೆಸ್ ರೈಲಿಗೆ ಸಚಿವರು ಹಸಿರು ನಿಶಾನೆ ತೋರಿದರು.

<><><>

**ಕರ್ನಾಟಕ ರಾಜ್ಯವು ಹಾಲು** ಉತ್ಪಾದನೆಯಲ್ಲಿ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಹೈನುಗಾರಿಕೆ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಆಯೋಜಿತ, ಕೃಷಿ ಮೇಳ–2025 ಉದ್ಘಾಟಿಸಿ, ಶ್ರೇಷ್ಠ ಕೃಷಿಕ ಹಾಗೂ ಕೃಷಿ ಮಹಿಳೆ ಪ್ರಶಸ್ತಿಗಳನ್ನು ಪ್ರದಾನಿಸಿ ಅವರು ಮಾತನಾಡಿದರು. ಪ್ರವಾಹ ಪೀಡಿತ ಬೆಣ್ಣೆಹಳ್ಳ ಅಭಿವೃದ್ಧಿಗೆ 200 ಕೋಟಿ ರೂಪಾಯಿ ಅನುದಾನ ನೀಡಲಾಗಿದ್ದು, ಗುತ್ತಿಗೆ ಕರೆಯಲಾಗಿದೆ ಎಂದರು.

<><><>

**ಕೃಷಿ ಇಲಾಖೆ ಮೂಲಕ** ಸಿರಿಧಾನ್ಯಗಳನ್ನು ಖರೀದಿಸಿ, ಪಡಿತರ ಮೂಲಕ ವಿತರಿಸಲು ಸರ್ಕಾರ ಯೋಜಿಸಿದೆ ಎಂದು ಕೃಷಿ ಖಾತೆ ಸಚಿವ ಚಲುವರಾಯಸ್ವಾಮಿ ಹೇಳಿದರು. ಕೃಷಿ ಮೇಳದ ಕೊನೆಯ ದಿನವಾದ ಇಂದು, 'ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ–ಅವಕಾಶಗಳು ಹಾಗೂ ಸವಾಲುಗಳು' ಕುರಿತಂತೆ ವಿಚಾರಗೋಷ್ಠಿ ಜರುಗಲಿದೆ. ಸಾಯಂಕಾಲ 4 ಗಂಟೆಗೆ ಸಮಾರೋಪ ಕಾರ್ಯಕ್ರಮ ಆಯೋಜಿತವಾಗಿದೆ.

<><><>

**ದೇಶದಲ್ಲಿ ತಂತ್ರಜ್ಞಾನ ಹಾಗೂ** ಇಂಜಿನಿಯರಿಂಗ್ ಪರಿಣತಿಯನ್ನು, ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಮಾತ್ರವಲ್ಲದೆ, ಸಾರ್ವಜನಿಕ ಆರೋಗ್ಯ, ನೀರಿನ ಸುರಕ್ಷತೆ ಹಾಗೂ ಪರಿಸರ ಸುಸ್ಥಿರತೆಗೂ ಬಳಸಿಕೊಳ್ಳಬೇಕಿದೆ ಎಂದು ಸಂಸದ ಡಾಕ್ಟರ ಸಿ.ಎನ್ ಮಂಜುನಾಥ ಹೇಳಿದರು. ಬೆಂಗಳೂರಿನಲ್ಲಿ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟ– ಎಫ್.ಕೆ.ಸಿ.ಸಿಐ ವತಿಯಿಂದ ಆಯೋಜಿತ ಅಭಿಯಂತರರ ದಿನಾಚರಣೆಯಂದು, ಸರ್.ಎಂ. ವಿಶ್ವೇಶ್ವರಾಯ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು. ಅಭಿಯಂತರರು ಅಂತರ್ಜಲ ಮಾಲಿನ್ಯ ತಡೆ ಹಾಗೂ ಕೆರೆಗಳ ಪುನಶ್ಚೇತನದಂತಹ ಕಾರ್ಯಗಳಿಗೆ ಮುಂದಾಳತ್ವ ವಹಿಸುವಂತೆ ಕೋರಿದರು.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು** ಇಂದು ಸಂಜೆ ಕಲಬುರಗಿಗೆ ಭೇಟಿ ನೀಡಲಿದ್ದು, ನಾಳೆ 17 ರಂದು, ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 9 ಗಂಟೆಗೆ, ಪೊಲೀಸ್ ಕವಾಯತು ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಸಾರ್ವಜನಿಕ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ, ಅಜಯ ಸಿಂಗ್, ಕಲಬುರಗಿಯಲ್ಲಿ ತಿಳಿಸಿದ್ದಾರೆ. ಹೃದ್ರೋಗಿಗಳಿಗೆ ಝಿರೋ ಅವರ್ ನಲ್ಲಿ, ತುರ್ತು ಆರೋಗ್ಯ ಸೇವೆಗೆ ಸಹಕಾರಿಯಾಗಲಿರುವ, ಕೆ.ಕೆ.ಆರ್.ಡಿ.ಬಿ ಆರ್ಥಿಕ ನೆರವಿನ 'ಹಾರ್ಟ್ ಲೈನ್' ಯೋಜನೆಗೆ ಮುಖ್ಯಮಂತ್ರಿಯವರು ಚಾಲನೆ ನೀಡಲಿದ್ದಾರೆ ಎಂದರು.

<><><>

**ಕೇಂದ್ರದ ಸರಕು ಮತ್ತು ಸೇವಾ ತೆರಿಗೆ** ಮಂಡಳಿ ಶಿಫಾರಸಿನಂತೆ, ಪರಿ ್ಕೃತ ಸರಕು ಮತ್ತು ಸೇವಾ ತೆರಿಗೆ, ಅಧಿನಿಯಮ, ಈ ತಿಂಗಳ 22ನೇ ತಾರೀಖಿನಿಂದ, ಜಾರಿಗೊಳ್ಳಲಿದೆ. ಕೃಷಿ ಉಪಕರಣಗಳು, ಸಲಕರಣೆಗಳ ಮೇಲಿನ ತೆರಿಗೆಗಳನ್ನು ಶೇಕಡ 5ಕ್ಕೆ ಇಳಿಸಲಾಗಿದೆ. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಟ್ರ್ಯಾಕ್ಟರ ಸೇರಿದಂತೆ ಕೃಷಿ ಯಂತ್ರಗಳು, ಬಿಡಿಭಾಗಗಳ ಮೇಲಿನ ತೆರಿಗೆಗಳನ್ನು ಶೇಕಡ 5 ಕ್ಕೆ ಇಳಿಸಲಾಗಿದ್ದು, ರೈತರಿಗೆ ಸಹಕಾರಿಯಾಗಿದೆ. ಈ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಗದಗ ಓಂ ಸಾಯಿ ಮೋಟರ್ಸ್ ವ್ಯವಸ್ಥಾಪಕ ನಿರ್ದೇಶಕರಾದ ಶರತ್ ವೀರನಗೌಡರ

<><><>

**ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ** ಕಲ್ಯಾಣ ಇಲಾಖೆ ವತಿಯಿಂದ, ಪೋಷಣ್ ಮಾಸಾಚರಣೆ ರಾಜ್ಯಾದ್ಯಂತ 12 ರಿಂದ ಆರಂಭವಾಗಿದ್ದು, ಅಕ್ಟೋಬರ್ 11 ರವರೆಗೆ ಆಯೋಜಿತವಾಗಿದೆ. ವಿಜಯನಗರ ಜಿಲ್ಲೆಯಲ್ಲಿ, ತಾಲೂಕು ಮಟ್ಟದ ಪೋಷಣ ಮಾಸಾಚರಣೆಗೆ, 'ಏಕ್ ಪೇಡ್ ಮಾ ಕೆ ನಾಮ್', ತಾಯಿಯ ಹೆಸರಿನಲ್ಲಿ ಒಂದು ಗಿಡ ನೆಡುವ ಮೂಲಕ ಚಾಲನೆ ನೀಡಲಾಯಿತು.

<><><>

**ರಾಜ್ಯಾದ್ಯಂತ ಲಿಂಗತ್ವ ಅಲ್ಪಸಂಖ್ಯಾತರ** ಮೊದಲ ಹಂತದ ಸಮೀಕ್ಷೆ ಹಾಗೂ ಧಾರವಾಡ, ಬೆಳಗಾವಿ ಸೇರಿದಂತೆ, ರಾಜ್ಯದ 15 ಜಿಲ್ಲೆಗಳಲ್ಲಿ ವಿಮುಕ್ತ ದೇವದಾಸಿಯರ ಸಮೀಕ್ಷೆ ಆರಂಭಗೊಂಡಿದೆ. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಆಯೋಜಿತ ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆಗೆ 'ಕರ್ಮಣಿ ವೆಬ್ ಅಪ್ಲಿಕೇಶನ್' ಸಿದ್ಧಪಡಿಸಲಾಗಿದೆ. ವಿಮುಕ್ತ ದೇವದಾಸಿಯರ ಮರು ಸಮೀಕ್ಷೆಯನ್ನು ಪ್ರತ್ಯೇಕ ವೆಬ್ ಅಪ್ಲಿಕೇಶನ್ ಆಧರಿಸಿ ಮಾಡಲಾಗುವುದು ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

<><><>

**'ವಿಜ್ಞಾನದಿಂದ, ಜಾಗತಿಕ ಕ್ರಿಯೆಯೆಡೆಗೆ,** ಧ್ಯೇಯದೊಂದಿಗೆ, ಇಂದು ವಿಶ್ವ ಓಝೋನ್ ದಿನಾಚರಣೆ. ವಾಯು ಮಾಲಿನ್ಯದಿಂದಾಗುವ ಓಝೋನ್ ಪದರದ ನಾಶದ ಬಗ್ಗೆ ಜಾಗೃತಿ ಮೂಡಿಸುವ ದಿನವಾಗಿದೆ. ಇಂದು ಬೆಳಗ್ಗೆ 11 ಗಂಟೆಗೆ, ಕಲಬುರಗಿ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ 'ಶುದ್ಧ ಗಾಳಿ, ಆರೋಗ್ಯಯುತ ಭವಿಷ್ಯ: ಮಾಲಿನ್ಯ ತಡೆಗೆ ವಿಜ್ಞಾನದ ಏಕತೆ ಮತ್ತು ಕ್ರಿಯಾತ್ಮಕತೆ' ವಿಷಯದ ಬಗ್ಗೆ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗಾಗಿ ಉಪನ್ಯಾಸ ಕಾರ್ಯಕ್ರಮ ಆಯೋಜಿತವಾಗಿದೆ. ಪಿ.ಡಿ.ಎ ಇಂಜಿನಿಯರಿಂಗ್ ಸಹಾಯಕ ಪ್ರಾಧ್ಯಾಪಕ ಎಸ್.ಕೆ ಇಂಗನಕಲ್ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾಹಿತಿ ನೀಡಲಿದ್ದಾರೆ. ರಸಪ್ರಶ್ನೆ ಆಯೋಜಿತವಾಗಿದೆ.

<><><>

**ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ** ದಿನಾಚರಣೆ ಅಂಗವಾಗಿ ನಾಡಿನಾದ್ಯಂತ, ಮತದಾನ ಜಾಗೃತಿ ಅಭಿಯಾನ ಜರುಗಿದವು. ಗದಗ ಜಿಲ್ಲಾಡಳಿತ ಭವನದಲ್ಲಿ ಆಯೋಜಿತ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ, ರೋಣ ಶಾಸಕ ಜಿ.ಎಸ್ ಪಾಟೀಲ್ 'ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯು ವಿಶ್ವದಲ್ಲೇ ಶ್ರೇಷ್ಠ ಹಾಗೂ ಸುದೃಢವಾಗಿದೆ ಎಂದರು. ಬೆಳಗಾವಿ ಸುವರ್ಣ ಸೌಧದಲ್ಲಿ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮವನ್ನು ಪ್ರಾದೇಶಿಕ ಆಯುಕ್ತರಾದ ಜಾನಕಿ ಕೆ.ಎಂ ಉದ್ಘಾಟಿಸಿದರು.

<><><>

**ಕೇಂದ್ರ ರೇಲ್ವೆ ಹಾಗೂ ಮಾಹಿತಿ** ತಂತ್ರಜ್ಞಾನ ಖಾತೆ ಸಚಿವರಾದ, ಅಶ್ವಿನಿ ವೈ ್ಣವ್ ಇಂದು, ಬೆಂಗಳೂರಿಗೆ ಆಗಮಿಸಲಿದ್ದಾರೆ. ಮಧ್ಯಾಹ್ನ ಟಾಟಾ ನಗರದಲ್ಲಿ ಆಧಾರ್ ತಂತ್ರಜ್ಞಾನ ಕೇಂದ್ರಕ್ಕೆ ಭೇಟಿ ನೀಡಲಿರುವ ಅವರು, ಪರಿಶೀಲನೆ ನಡೆಸಲಿದ್ದಾರೆ.ಬಳಿಕ ದೊಡ್ಡಾನೆಕುಂದಿಯಲ್ಲಿ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ನಾಳೆ, 'ಸ್ವಸ್ಥ ನಾರಿ, ಸಶಕ್ತ ಪರಿವಾರ' ಅಭಿಯಾನಕ್ಕೆ, ಚಾಲನೆ ನೀಡಲಿದ್ದಾರೆ. ದೇಶಾದ್ಯಂತ ಮಹಿಳೆಯರು ಹಾಗೂ ಮಕ್ಕಳ ಆರೋಗ್ಯ ಸೇವೆಗಳನ್ನು ಬಲಪಡಿಸುವ ಗುರಿ ಹೊಂದಿದೆ. ಉತ್ತಮ ಹಾಗೂ ಗುಣಮಟ್ಟದ ಆರೈಕೆಯ ಲಭ್ಯತೆಯನ್ನು, ಖಚಿತ ಪಡಿಸುವ ಉದ್ದೇಶ ಹಾಗೂ ಆರೋಗ್ಯವಂತ ಕುಟುಂಬ, ಸಶಕ್ತ ಸಮುದಾಯ ನಿರ್ಮಾಣದ ಗುರಿ ಹೊಂದಿದೆ. ರಾಷ್ಟ್ರವ್ಯಾಪಿ ಅಭಿಯಾನದ ಭಾಗವಾಗಿ, 75 ಸಾವಿರ ಆರೋಗ್ಯ ಶಿಬಿರಗಳನ್ನು ಆಯು ್ಮಾನ್ ಆರೋಗ್ಯ ಮಂದಿರಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ಆಯೋಜಿಸಲಾಗುತ್ತಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ರಾಜ್ಯದ 300 ರೇಲ್ವೆ** ಕೆಳ ಸೇತುವೆ ಹಾಗೂ ಮೇಲ್ಸೇತುವೆ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದ ಆರ್ಥಿಕ ನೆರವು

**ರಾಜ್ಯದಲ್ಲಿ ಹೈನೋದ್ಯಮದ ಪ್ರಗತಿ:** ಹಾಲು ಉತ್ಪಾದನೆಯಲ್ಲಿ, ಕರ್ನಾಟಕಕ್ಕೆ ಎರಡನೇ ಸ್ಥಾನ

**ಕಲ್ಯಾಣ ಕರ್ನಾಟಕದಲ್ಲಿ ತುರ್ತು** ಹೃದ್ರೋಗ ಸೇವೆ: ಕೆ.ಕೆ.ಆರ್.ಡಿ.ಬಿ ಯಿಂದ 'ಹಾರ್ಟ್‌ಲೈನ್' ಯೋಜನೆ

**'ವಿಜ್ಞಾನದಿಂದ, ಜಾಗತಿಕ ಕ್ರಿಯೆಯೆಡೆಗೆ',** ಧ್ಯೇಯದೊಂದಿಗೆ, ಇಂದು ವಿಶ್ವ ಓಝೋನ್ ದಿನ

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>